# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 257/2021

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ಗುರುಸ್ವಾಮಿ | | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ/ಗಂಡನ ಹೆಸರು | ಃ ಶ್ರೀ ಲೇ.ನಂಜಪ್ಪ | | 11.02.2025 |
| ವಯಸ್ಸು | ಃ 48 ವರ್ಷ | | |
| ವೃತ್ತಿ | ಃ ಗ್ಲಾಸ್ ಅಂಗಡಿ | ಪ್ರಾ.ಸಾ. | ಃ 11 |
| ವಾಸಸ್ಥಳ | ಃ ಆಲನಹಳ್ಳಿ | ಚಾ.ಸಾ. | ಃ 12 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಚಾ.ಸಾ-3 ರಮೇಶ್ ಇವರ ಪರಿಚಯ ಇಲ್ಲ. 2020 ರಲ್ಲಿ ನನ್ನ ಬಳಿ ಬ್ರಿಜಾ ಕಾರು ಇತ್ತು ಆದರೆ ಅದರ ನಂಬರ್ ಈಗ ನೆನಪಿಲ್ಲ. ನನ್ನ ಕಾರನ್ನು 2020 ರಲ್ಲಿ ರಮೇಶ್ ಎನ್ನುವವರಿಗೆ ಕೊಟ್ಟಿದ್ದ ಬಗ್ಗೆ ನೆನಪಿಲ್ಲ. ಪೊಲೀಸರ ಮುಂದೆ ನನ್ನ ಕಾರನ್ನು ರಮೇಶ್ ಎನ್ನುವವರಿಗೆ ಕೊಟ್ಟಿದ್ದ ಬಗ್ಗೆ ಮತ್ತು ರಮೇಶ್ ಎನ್ನುವವರು ಅದನ್ನು ತೆಗೆದುಕೊಂಡು ಹೋದಾಗ ಅವರ ಮೇಲೆ ಹಲ್ಲೆ ಆಗಿದ್ದ ಬಗ್ಗೆ ಹೇಳಿಕೆ ಕೊಟ್ಟಿಲ್ಲ.

*ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.*

*ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-*

2. ದಿಃ04.10.2020 ರಂದು ನಾನು, ನಮ್ಮ ಕುಟುಬಂದವರು ಮತ್ತು ನನ್ನ ಸಂಬಂಧಿ ರಮೇಶ ನನ್ನ ಅಕ್ಕನ ಮದುವೆಗೆ ಬಟ್ಟೆ ಖರೀದಿ ಮಾಡಿ ವಾಪಸ್ಸು ಬಂದ ಬಳಿಕ ಸಂಜೆ

*6.30* ಕ್ಕೆ ರಮೇಶನು ತನ್ನ ಸ್ನೇಹಿತರನ್ನು ಮಾತನಾಡಿಸಿಕೊಂಡು ಬರಲು ನನ್ನ ಕಾರನ್ನು ತೆಗೆದುಕೊಂಡು ಹೋಗಿದ್ದ ಎಂದರೆ ಸರಿಯಲ್ಲ. ಆ ಕಾಲಕ್ಕೆ ಮರುದಿನ *05.10.2020* ರಂದು ಬೆಳಗ್ಗೆ ರಮೇಶ ನನ್ನ ಕಾರನ್ನು ವಾಪಸ್ಸು ಕೊಟ್ಟು ದಿಃ*04.10.2020* ರಂದು ರಾತ್ರಿ ತನ್ನ ಗೆಳೆಯರಾದ ನವೀನ್ ಕುಮಾರ್ ಮತ್ತು ಪವನ್ ಕುಮಾರ್ ಜೊತೆ ಟೀ ಕುಡಿಯಲು ರಾತ್ರಿ *12* ಗಂಟೆಗೆ ಹೋಗಿ ವಾಪಸ್ಸು ಬರುವಾಗ ರಾತ್ರಿ *12.45* ಕ್ಕೆ ಎಂ.ಜಿ.ರಸ್ತೆಯ ಜೆ.ಎಸ್.ಎಸ್ ಆಸ್ಪತ್ರೆ ಮುಂಭಾಗದ ಮುಖ್ಯ ದ್ವಾರದ ಬಳಿ ಅಂಬರೀಷ ಮತ್ತು ಸುರೇಶ ಸ್ವಾಮಿ ಎನ್ನುವವರು ಕಾರನ್ನು ಅಡ್ಡ ಗಟ್ಟಿರಮೇಶ, ನವೀನ್ ಕುಮಾರ್ ಮತ್ತು ಪವನ್ ಕುಮಾರ್ ಗೆ ಕೈಯಿಂದ ಹಲ್ಲೆ ಮಾಡಿದ್ದು, ಅಂಬರೀಷನು ನವೀನ್ ಕುಮಾರ್ ಗೆ ಕೊಲೆ ಮಾಡುವ ಉದ್ದೇಶದಿಂದ ರೇಜರ್ ನಿಂದ ಹೊಡೆದು ಗಾಯಪಡಿಸಿದ್ದ ಎಂದು ಹೇಳಿದ್ದ ಎಂದರೆ ನೆನಪಿಲ್ಲ. ಈ ಬಗ್ಗೆ ನನ್ನ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ-*10* ಎಂದು ಗುರುತಿಸಿದೆ.

ಪಾಟೀ ಸವಾಲು : ಆರೋಪಿ ಪರ ವಕೀಲರವರಿಂದಃ- ಇಲ್ಲ

ಮರು ವಿಚಾರಣೆಃ- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು